# ‘ಕೆರೆಗಳ ಅತಿಕ್ರಮಣ ತಡೆಗೆ ಕಠಿಣ ಕ್ರಮ ಅತ್ಯವಶ್ಯ’

ಶಿರಸಿ ಬ್ಯೂರೋ ವರದಿ

ಶಿರಸಿ : ಪಶ್ಚಿಮ ಘಟ್ಟದ ಕೆರೆಗಳ ಸಂರಕ್ಷಣೆಗೆ ರಾಜ್ಯ ಸರ್ಕಾರ ವಿಶೇಷ ಯೋಜನೆ ರೂಪಿಸಬೇಕು. ಜಲಾನಯನ ಪ್ರದೇಶದಲ್ಲಿ ಇರುವ ಅರಣ್ಯಗಳ ರಕ್ಷಣೆ ಹಾಗೂ ವನೀಕರಣಕ್ಕೆ ಯೋಜನೆಯನ್ನು ಅರಣ್ಯ ಇಲಾಖೆ ರೂಪಿಸಬೇಕು. ಕೆರೆಗಳ ಅತಿಕ್ರಮಣ ತಡೆಗೆ ಕಠಿಣ ಕ್ರಮ ಅತ್ಯವಶ್ಯ ಎಂದು ಶನಿವಾರ ಸಂಜೆ ಸ್ವರ್ಣವಲ್ಲಿಯಲ್ಲಿ ಮುಕ್ತಾಯವಾದ ರಾಷ್ಟ್ರ ಮಟ್ಟದ ಕೆರೆ ಸಮ್ಮೇಳನ ನಿರ್ಣಯ ಕೈಗೊಳ್ಳಲಾಗಿದೆ.

ವಿದ್ಯಾರ್ಥಿಗಳಿಗೆ ಕೆರೆಗಳ ಸಮೀಕ್ಷೆ ಅಧ್ಯಯನ ನಡೆಸಲು ವಿಶೇಷ ಕಾರ್ಯಕ್ರಮವನ್ನು ಶಿಕ್ಷಣ ಇಲಾಖೆ ರೂಪಿಸಬೇಕು. ಭಾರತ ಸರ್ಕಾರದ ಸ್ವಚ್ಛತಾ ಅಭಿಯಾನದ ವ್ಯಾಪ್ತಿಯಲ್ಲಿ ಕೆರೆ ಸ್ವಚ್ಛತೆಗೆ ವಿಶೇಷ ಆದ್ಯತೆ ನೀಡುವಂತೆ ಆಗಬೇಕು ಎಂದು ನಿರ್ಣಯ ಕೈಗೊಳ್ಳಲಾಗಿದೆ.

ಸ್ಥಾನಿಕ ಸಂಘ- ಸಂಸ್ಥೆಗಳು ಕೆರೆ ಸ್ವಚ್ಛತಾ ಅಭಿಯಾನ, ಕೆರೆ ಉತ್ಸವ, ಕೆರೆ ಹಬ್ಬ ಮುಂತಾದ ವ್ಯಾಪಕ ರಚನಾತ್ಮಕ ಜನಾಂದೋಲನ ಕೈಗೊಳ್ಳಬೇಕು ಮಲೆನಾಡಿನ

4ನೇ ಪುಟಕ್ಕೆ

# ಕಠಿಣ ಕ್ರಮ ಅತ್ಯವಶ್ಯ

ಕೆರೆಗಳಲ್ಲಿ ಹೂಳು ತುಂಬಿದೆ. ಕೆರೆ ಹೂಳು ತೆಗೆಯಲು ಸ್ಥಾನೀಯ ಪ್ರಯತ್ನ ಹೆಚ್ಚಾಗಬೇಕು. ದೇವಸ್ಥಾನ ಪುಷ್ಕರಣಿ, ಪುಣ್ಯ ತೀರ್ಥಗಳ ಉತ್ತಮ ನಿರ್ವಹಣೆ, ರಕ್ಷಣೆಗೆ ದೇವಾಲಯ ಆಡಳಿತ ಮಂಡಳಿ ಮುಂದಾಗಬೇಕು ಎಂದು ತಿಳಿಸಲಾಗಿದೆ.

ಕಪ್ಪತಗುಡ್ಡ ಹೊಗ್ರೆಕಾನಗಿರಿ, ಕೊಡಚಾದ್ರಿಗಳಂಥ ಅಕ್ಷಯ ಜಲಪಾತ್ರೆ ಬರಿದು ಮಾಡುವ ಬೃಹತ್ ಗಣಿಗಾರಿಕೆಗೆ ಸರ್ಕಾರ ಅವಕಾಶ ನೀಡಬಾರದು. ರಾಜ್ಯದಲ್ಲಿರುವ ಗ್ರಾಮ ಮಟ್ಟದ ಕೆರೆ ಅಭಿವೃದ್ಧಿ ಸಂಘಗಳನ್ನು ಸರ್ಕಾರ ಸಕ್ರಿಯಗೊಳಿಸಬೇಕು. ಗ್ರಾಮ ಅರಣ್ಯ ಸಮಿತಿಗಳ ಮೂಲಕ ಕೆರೆಗಳ ಸಂರಕ್ಷಣೆಗೆ ಹಾಗೂ ಅಭಿವೃದ್ಧಿಗೆ ಅರಣ್ಯ ಇಲಾಖೆ ಯೋಜನೆ ರೂಪಿಸಬೇಕು. ದೇವರಕಾಡು, ರಾಮಪತ್ರೆಜಡ್ಡಿಗಳಂಥಹ ಜೌಗು ಭೂಮಿಯನ್ನುಸೂಕ್ಷ್ಮ ಪ್ರದೇಶ ಎಂದು ಗುರುತಿಸಿ ರಕ್ಷಿಸಬೇಕು ಎಂದು ಒಮ್ಮತ ನಿರ್ಧಾರಕ್ಕೆ ಬರಲಾಗಿದೆ.

ಪಶ್ಚಿಮಘಟ್ಟದ ಜಲಮೂಲಗಳು, ಕೆರೆಗಳು, ಹಳ್ಳಗಳು ಅತಿಯಾದ ಕ್ರಿಮಿನಾಶಕ ಬಳಕೆಯಿಂದ ತೀವ್ರವಾಗಿ ಮಾಲಿನ್ಯಕ್ಕೆ ಒಳಗಾಗುತ್ತಿವೆ. ಎಂಡೋಸಲ್ಫಾನ್ ಸಿಂಪಡಣೆಯಿಂದ ಆಗಿರುವ ಭಾರಿ ಅನಾಹುತಗಳು ಈಗಾಗಲೇ ಇವೆ. ಆದ್ದರಿಂದ ಸರ್ಕಾರ ಮಲೆನಾಡಿನಲ್ಲಿ ಅತಿಯಾದ ಕ್ರಿಮಿನಾಶಕ ಬಳಕೆಗೆ ಕಡಿವಾಣ ಹಾಕಬೇಕು ಎಂದು ಒತ್ತಡ ಹಾಕಲಾಗಿದೆ.